The Mysore Press

Mysore

WE UNDERTAKE TO PRINT

JOBS BOOKS & PERIODICALS

Neat Workmanship Prompt Execution Moderate Charges

Printed and Published by B. S. Murthy, B. A., at the Mysore Press, Mysore, for the Editor and

ಖಿ ಡಿ ಪ್ರ ತಿ ೩ ಪೈ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 1—8—0
ಒಂದು ವರ್ಷಕ್ಕೆ ಕಡಮೆ ಚಂದಾ ತೆಗೆದುಕೊಳ್ಳುವುದಿಲ್ಲ.
ವಿ. ಪಿ. ಪದ್ಧತಿ ಇಲ್ಲ.
ಪ್ರಕಟಣೆ ದಂಡನ್ನು ಬೇಕಾದವರಿಗೆ ತಿಳಿಸುತ್ತೆ.

Office—Chamaraja Agrahar, Mysore
ಆಫೀಸ್—ಚಾಮರಾಜ ಅಗ್ರಹಾರ ಮೈಸೂರು

SATYAVADI

"ಸತ್ಯವಾದಿ" ವಾರಪತ್ರಿಕ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು

Regd. No. M. 1299.

"SATYAVADI"
OFFERS A
Profitable Medium
For Advertising
Space limited
Rates on enquiry

ಸಂಪುಟ ೭] ಮೈಸೂರು, ಶುಕ್ರವಾರ, ೨೪ ನೇ ಏಪ್ರಿಲ್ ೧೯೩೫. [ಸಂಚಿಕೆ ೧೪

೧೦೦೦ ರೂಪಾಯಿಗಳ ಬಹುಮಾನ
ಲೋಕಪ್ರಸಿದ್ಧವಾದ
ಸಾಲಾಮಿಸ್ರಮುರಬ್ಬ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು ತೆಗೆದುಕೊಳ್ಳಿರಿ

ಇದರ ಸೇವನೆಯಿಂದ ವೀರ್ಯವು ನೀರಿನಂತಿದ್ದರೂ ಸ್ಪಷ್ಟೇಂದ್ರಿಯವಾದರೂ ಸ್ತ್ರೀಸಂಗಕ್ಕೆ ಮೊದಲೆ ಸ್ಖಲನವಾದರು ಮೂತ್ರದೊಂದಿಗೆ ಹೊಗುತ್ತಿದ್ದರೂ, ದೋಷರ ಹಿತವಾಗಿ ಶರೀರಕ್ಕೆ ದಾರ್ಢ್ಯವನ್ನೂ ಆರೋಗ್ಯವನ್ನೂ ಉಂಟುಮಾಡುವದು, ಅಜೀರ್ಣ, ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ 'ಸಾಲಾಮಿಸ್ರ' ಎಂಬುವುದು ಕಾಬೂಲ್ ಕಾಂದಹಾರ್ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ. ಈ ಔಷಧದಿಂದ ಗುಣಹೊಂದಿದ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ, ಆಫ್ರಿಕ, ಬರ್ಮ, ಪೀನಾಂಗ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ನುಬೇಕಾದರೂ ತರಿಸಿ ನೋಡಬಹುದು.
ವ್ಯಳ್ಳು ಎಂದು ನಿರ್ಧರಪಡಿಸುವವ.
ನ ಬಹುಮಾನವು ಕೊಡಲ್ಪ
ಕೊಡದೆ ನಿರಾಕರಿಸಿ
ಕ ಅದನ್ನು ಪಡೆಯು
15 ದಿವಸ ಸೇವಿಸಿ
ಾಗಿ ತೋರಬಹುದು.
ರ್ಣವಾಗಿ ಗುಣವ
ನುವಾನ ಪತ್ರಿಕೆಯು
ಹೆಸರು ವಿಳಾಸ
ರಬೇಕು.

2—0—0

3 ಡಬ್ಬಿಗಳಿಗೆ 8
ಳಗಳಲ್ಲಿಯೂ
ಲ್ಸ್ ತರಿಸಿ

ಸಿಟಿ.
ಧ್ಯರು,

ಪೀಮೆ ಭಂಗಾರದ ರೇಡಿಯಂ ರಿಸ್ಟ್‌ವಾಚ್



ಚಿತ್ರದಲ್ಲಿ ಕಾಣುವಂತೆಯೇ ಇರುವ ಈ ಗಡಿಯಾರಗಳು ಹೊಸದಾಗಿ ಬರಲಿವೆ. ಈ ಗಡಿಯಾರದ ಕಾಂಪೊಸಿಷನ್‌ಗಳು ಬಹು ಒಳ್ಳೆಯವು. ಮತ್ತು ಬಲಿಷ್ಟವಾದವು. ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಒಂದು ವೇಳೆ ಹಿಂದು ಮುಂದು ಹೋದರೂ ನಾವೇ ಸರಿಮಾಡಿಕೊಳ್ಳಬಹುದು. ಈ ಗಡಿಯಾರಗಳು ಸ್ವಿಡ್ಜರ್‌ಲ್ಯಾಂಡು ದೇಶದಲ್ಲಿ ತಯಾರಾದುವು. ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಬೇಕು. ಈ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡ ಬೇಕಾದರೆ ಬೆಳಕು ಆವಶ್ಯಕವಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಜೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವುದು. ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವುದು.

ಕ್ರಯ ಗಡಿಯಾರ 1 ಕ್ಕೆ ರೂ. 7—8—0
ಬೆಳ್ಳಿ ಗಡಿಯಾರ 1 ಕ್ಕೆ ರೂ. 9—0—0

ವಿಳಾಸ:—ಗೌರಿ ಅಂಡ್ ಕೋ.,
ನಂ. 39 ಪರಮಾನಂದ ಮೊದಲಿ ಬೀದಿ.
ಮಿಂಟ್ ಪೋಸ್ಟು, ಮದರಾಸ್.

ಹೊಸಮಾದರಿಯ ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜ್ಯಕ್ಕೆ ಯೋಗ್ಯವಾದ 'ದಶಾಂಗಬತ್ತಿ' ಎಂಬ ದಾಗಿ ಪ್ರಸಿದ್ಧಿಹೊಂದಿರುವ ಹೊಸರೀತಿಯ ಊದು ಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ರಯ ಸೇರು ೧ ಕ್ಕೆ (ಸುಮಾರು ೬೦೦ ಬತ್ತಿಗಳು) ೩ ರೂಪಾಯಿ ಮಾತ್ರ. ಸರ್ವರೂ ತರಿಸಿ ತನ್ಮೂಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಪ್ರಾರ್ಥನೆ. ನಮ್ಮಲ್ಲಿ ಇನ್ನೂ ಇತರ ವಿಧವಾದ ಹೆಬ್ಬಿನ ಬೆಲೆಯ ಅಂಬರ್ ಕಸ್ತೂರಿ ಬತ್ತಿಗಳೂ, ಗಂಧದಬಿಲ್ಲೆ ಅರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ.—

ಇದಲ್ಲದೆ ನಂಜನಗೂಡಿನ ಮಿ|| ಬಿ.ವಿ. ಪಂಡಿತರ ಲೋಕಪ್ರಸಿದ್ಧವಾದ ಸಿದ್ಧೌಷಧಗಳೂ, ಷರಬತ್ತುಗಳೂ, ತೈಲಗಳೂ, ಲೇಹ್ಯಗಳೂ ನಮ್ಮಲ್ಲಿ ಸಿಕ್ಕುತ್ತೆ.

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,
ಸಂತೇಪೇಟೆ, ಮೈಸೂರು.

ಸತ್ಯವಾದಿ ಪ್ರೆಸ್ ಮೈಸೂರು

—೦—

ನಾವು ಎಲ್ಲಾ ವಿಧವಾದ ಮುದ್ರಣ ಕೆಲಸವನ್ನೂ ಸುಲಭ ದರದಿಂದಲೂ, ಸೊಗಸಾಗಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ.

MYSORE GOVERNMENT
LOAN BONDS
&
Shares of Prominent
Companies
BOUGHT & SOLD

For particulars apply to:—

THE SEMAH ELISHA COMPANY
MYSORE.

ಮೈಸೂರು ಸರ್ಕಾರಿ ಸಾಲದ ಪತ್ರ
ಮತ್ತು ಕಂಪನಿ ಷೇರುಗಳನ್ನು
ಕೊಂಡುಕೊಳ್ಳುತ್ತೇವೆ
ಮತ್ತು
ಬಿಕರಿ ಮಾಡುತ್ತೇವೆ.

ಸೇಮಾ ಇಲೈಷಾ ಕಂಪೆನಿ ಮೈಸೂರು.

ಭಾರತಖಂಡದ ಸರ್ವಸ್ವ

ಭರತಖಂಡದ ಪ್ರಖ್ಯಾತ ಕವಯಿತ್ರಿಯರೂ ಉಜ್ವಲ ದೇಶಭಕ್ತೆಯರೂ ಆದ ಶ್ರೀಮತಿ ಸರೋಜಿನಿ ದೇವಿಯರ ಸುಪ್ರಸಿದ್ಧ ಪುಸ್ತಕವಾದ 'ಸೋಲ್ ಆಫ್ ಇಂಡಿಯ' ಎಂಬುದರ ಕನ್ನಡ ಪರಿವರ್ತನ ಕ್ರಯ 1 ಆಣೆ ಒಂದೂವರಾಣೆಯ ಸ್ಟ್ಯಾಂಪನ್ನು ಕಳುಹಿಸಿದರೆ ಒಂದು ಪುಸ್ತಕ ಕಳುಹಿಸಲ್ಪಡುತ್ತದೆ.

ವಿಳಾಸ—ಸತ್ಯವಾದಿ ಆಫೀಸ್ ಮೈಸೂರು.

ಕಲಾಮಂದಿರಂ, ಬೆಂಗಳೂರು ಸಿಟಿ

ನಮ್ಮಲ್ಲಿ ಎಲ್ಲಾ ವಿಧವಾದ ಪೈಯಿಂಟಿಂಗ್ ಎನ್‌ಲಾರ್ಜಮೆಂಟು ಕೆಲಸಗಳೂ, ಚಿತ್ರಪಠಗಳನ್ನು ಬರೆಯುವುದು ಮುಂತಾದ ಕುಶಲವಿದ್ಯೆಗಳು ಉತ್ತಮ ರೀತಿಯಿಂದ ನಡೆಯುತ್ತವೆ. ಮತ್ತು ವಿದ್ಯಾರ್ಥಿಗಳನ್ನು ಕುಶಲವಿದ್ಯೆಗಳಲ್ಲಿ ತಯಾರ್ಮಾಡುವೆವು. ಈ ಒಂದು ತಿಂಗಳವರೆಗೆ 16-12 ಸೈಜು ಎನ್‌ಲಾರ್ಜ್‌ಮೆಂಟ್ ಮಾಡುವುದಕ್ಕೆ ಕಮ್ಮಿ ಚಾರ್ಜು ಅಂದರೆ 12 ರುಪಾಯಿಗೆ ಮಾಡಿಕೊಡುವೆವು. ಫೋಟೋ ಮತ್ತು ಅರ್ಧ ಹಣ ರವಾನಿಸಿ.

ಪತ್ರಸಂವಾದ

ಉಪಲೇಖಕರ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ. ಇತರ ಪತ್ರಿಕೆಗಳಿಗೆ ಕಳುಹಿಸಿದ ಲೇಖನಗಳನ್ನು ನಮಗೆ ಕಳುಹಿಸಬೇಕಾದುದಿಲ್ಲ.

ಗುರುಕುಲ ಸತ್ಯಾಗ್ರಹ

ಡಾ|| ವರದರಾಜಲು ನಾಯಡುರವರು ಸದ್ಯದಲ್ಲಿಯೇ "ತಮಿಳುನಾಡು ಗುರುಕುಲ" ಸತ್ಯಾಗ್ರಹವನ್ನು ಪ್ರಾರಂಭಿಸುವ ಅಭಿಪ್ರಾಯವುಳ್ಳವರಾಗಿರುವರೆಂದು ಈಚೆಗೆ ಬಂದ ವರ್ತಮಾನದಿಂದ ತಿಳಿಯಬರುತ್ತದೆ. ಸತ್ಯಾಗ್ರಹದ ಪ್ರಯುಕ್ತ ಈಗಾಗಲೇ ಒಂದು ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಾಗಿ ಧನ ವಸೂಲಾಗಿರುವುದಲ್ಲದೆ ಅನೇಕ ಮಂದಿ ಸ್ವಯಂಸೇವಕರಾಗಿಬರಲು ವಾಗ್ದಾನಮಾಡಿರುವರು. ಮುಂದೆ ಇದರ ಪರಿಣಾಮವೇನಾಗಬಹುದೋ, ಈಗ ಹೇಳುವುದಸಾಧ್ಯ.

ಮೊದಲು ಈ ಸತ್ಯಾಗ್ರಹಕ್ಕೆ ಕಾರಣವೇನೆಂದು ನೋಡೋಣ. ಈ ತಮಿಳು ನಾಡು ಗುರುಕುಲದಲ್ಲಿ ಓದುತ್ತಿರುವ ಬ್ರಾಹ್ಮಣ ಬ್ರಾಹ್ಮಣೇತರ ವಿದ್ಯಾರ್ಥಿಗಳೆಲ್ಲರೂ ತಮ್ಮ ಮತಾಚಾರಗಳನ್ನು ಲಕ್ಷಿಸದೆ ಒಂದೇ ಪಙ್ತಿಯಲ್ಲಿ ಕುಳಿತು ಭೋಜನಮಾಡಬೇಕೆಂದು ಡಾ|| ವರದರಾಜುಲುಯವರ ಸಂಕಲ್ಪ. ಅಲ್ಲಿಯ ಅನೇಕ ಬ್ರಾಹ್ಮಣರು ಒಂದೇ ಪಙ್ತಿಯಲ್ಲಿ ಕುಳಿತು ಭೋಜನಮಾಡಬೇಕಾದರೆ ಬೇರೆ ಪಙ್ತಿಗಳನ್ನು ಹಾಕಬೇಕೆಂದು ಕೇಳುವರು. ಒಂದೇ ಭೋಜನಶಾಲೆಯಲ್ಲಿ ಎದುರು ಬದುರು ಪಙ್ತಿಗಳಲ್ಲಿ ಕುಳಿತುಕೊಂಡು ಭೋಜನಮಾಡುವುದಕ್ಕೆ ಕೂಡ ಬ್ರಾಹ್ಮಣರು ಒಪ್ಪಿರುವರು ಡಾ|| ವರದರಾಜುಲುಯವರು ಇದಕ್ಕೂ ಒಪ್ಪದೆ ಬ್ರಾಹ್ಮಣರು ಬ್ರಾಹ್ಮಣೇತರರೊಡನೆಯೇ ಕುಳಿತುಕೊಂಡು ಏಕಪಙ್ತಿಯಲ್ಲಿಯೇ ಊಟಮಾಡಬೇಕೆಂದು ಕೇಳುವರು. ಇದಕ್ಕೆ ಬ್ರಾಹ್ಮಣರು ಸಮ್ಮತಿಸದಿದ್ದಕಾರಣ ಸತ್ಯಾಗ್ರಹ ಪ್ರಾರಂಭಿಸಬೇಕೆಂದಿರುವರು. ಇದರ ಮೊದಲು ಏಕಪಙ್ತಿಯಲ್ಲಿ ಕುಳಿತುಕೊಂಡು ಊಟಮಾಡುವ ವಿಚಾರದಲ್ಲಿ ಮಹಾತ್ಮರ ಅಭಿಪ್ರಾಯವನ್ನು ಕೇಳಿದರು. ಮಹಾತ್ಮರು, ಒಬ್ಬರೊಡನೆ ಮತ್ತೊಬ್ಬರು ಕುಳಿತುಕೊಂಡು ಊಟಮಾಡುವುದು ಅವರವರ ಇಷ್ಟಾನುಸಾರಕ್ಕೆ ಸೇರಿದುದೆಂದೂ, ಈ ವಿಷಯದಲ್ಲಿ ಯಾವ ಪಕ್ಷದವರೂ ಅನ್ಯ ಪಕ್ಷದವರನ್ನು ನಿರ್ಬಂಧಪಡಿಸತಕ್ಕದ್ದು ಸರಿಯಲ್ಲವೆಂದೂ ಹೇಳಿದರು. ವರದರಾಜುಲುಯವರಿಗೆ ಈ ಅಭಿಪ್ರಾಯವು ಸಮ್ಮತವಾಗಲಿಲ್ಲ. ಬ್ರಾಹ್ಮಣರ ಗರ್ವ ಮುರಿಯಲು ಇವರು ಸತ್ಯಾಗ್ರಹ ಪ್ರಾರಂಭಿಸುವರು.

ಭರತಖಂಡದ ಪ್ರತಿಯೊಂದು ಜಾತಿಯವರು ತಾವೇ ಮೇಲೆಂದು ಹೇಳುತ್ತಿರುವಲ್ಲಿ ಬ್ರಾಹ್ಮಣರೂ ಕೂಡ ತಪ್ಪಿಗೆ ತಮ್ಮ ಜಾತಿಯೇ ಹೆಚ್ಚು ಎಂದು ಹೇಳುವುದರಲ್ಲಿ ಯಾವ ದೋಷವೂ ಕಾಣುವುದಿಲ್ಲ. ಅನೇಕ ಬ್ರಾಹ್ಮಣೇತರ (ಹಿಂದೂ) ಜಾತಿಯವರು ತಮ್ಮ ಜಾತಿಯವರಿಂದ ವಿನಃ ಮಿಕ್ಕ ಜಾತಿಯವರಿಂದ ಸ್ವಲ್ಪ ನೀರನ್ನೂ ಕೂಡ ತೆಗೆದುಕೊಳ್ಳುವುದಿಲ್ಲ. ಈಚೆಗೆ ನಡೆದ "ದೇವಾಂಗ ಮಹಾಸಭೆಯ" ಅಧ್ಯಕ್ಷರ ಭಾಷಣವನ್ನು ನೋಡಿದರೆ ಗೊತ್ತಾಗುವುದು. ಲಿಂಗಾಯಿತರು, ಜೈನರು ಮತ್ತು ನಾಯರು ಸಂಗಡವೂ ಕೂಡ ಬೇರೆ ಜಾತಿಯವರಲ್ಲಿ ನೀರು ಕೂಡ ಮುಟ್ಟುವುದಿಲ್ಲ. ಆದುದರಿಂದ ಬ್ರಾಹ್ಮಣರು ಕೂಡ ಊಟ ಉಪಚಾರಗಳಲ್ಲಿ ತಾವು ಪ್ರತ್ಯೇಕವಾಗಿ ಕುಳಿತುಕೊಳ್ಳಬೇಕೆಂದು ಹೇಳುವುದರಲ್ಲಿ ತಪ್ಪೇನೂ ಕಾಣುವುದಿಲ್ಲ. ಅಲ್ಲದೆ ತ್ರಿಮತಸ್ಥ ಬ್ರಾಹ್ಮಣರು ಒಬ್ಬರಲ್ಲಿ ಮತ್ತೊಬ್ಬರು ಊಟಮಾಡುವುದಿಲ್ಲ. ಹೀಗಿರುವಲ್ಲಿ ಡಾ|| ವರದರಾಜುಲುಯವರು ಅನಾದಿಯಿಂದ ಬಂದ ಪದ್ಧತಿಯನ್ನು ಒಂದೇಸಲ ನಿರ್ಮೂಲಮಾಡಬೇಕೆಂದಿರುವುದು ನಮಗೆ ಸರಿಯಾಗಿ ತೋರುವುದಿಲ್ಲ. ಬ್ರಾಹ್ಮಣರು ಬ್ರಾಹ್ಮಣೇತರೊಡನೆ ಏಕಕಾಲದಲ್ಲಿ (ಆದರೆ ಬೇರೆ ಪಙ್ತಿಯಲ್ಲಿ) ಕುಳಿತು ಊಟಮಾಡುವುದಕ್ಕೆ ಒಪ್ಪಿರುವುದೇ ದೊಡ್ಡ ವಿಚಾರ. ಇಷ್ಟರಲ್ಲಿ ಡಾ|| ವರದರಾಜುಲುಯವರಿಗೆ ತೃಪ್ತಿಯಾಗದಿರುವುದು ಆಶ್ಚರ್ಯವೇ ಸರಿ! ಕೆಲವರು ಇವರಿಗೆ ಸಹಾಯಕರಾಗಿದ್ದರು. ಬ್ರಾಹ್ಮಣೇತರ ಮಹಾಜನರಲ್ಲಿಯೇ ಇವರ ಅಭಿಪ್ರಾಯದಂತೆ ಅನೇಕರು ನಡೆಯಲು ಖಂಡಿತವಾಗಿಯೂ ಒಪ್ಪಲಾರರು. ಸದ್ಯದಲ್ಲಿ ಭಾರತೀಯರಾದ ನಮ್ಮ ನಮ್ಮಲ್ಲಿಯೇ ಪರಸ್ಪರ ಸತ್ಯಾಗ್ರಹಗಳು ಪ್ರಾರಂಭವಾಗುವ ಸಂಭವಗಳು ಉಂಟಾಗುವುದರಿಂದ ಸ್ವರಾಜ್ಯದ ಆಶೆಯನ್ನು ಸದ್ಯ ಬಿಟ್ಟು ಬಿಟ್ಟರೆ ಮೇಲು. ಭಾರತೀಯರೆಲ್ಲರೂ ತಮ್ಮ ಆಚಾರ ವ್ಯವಹಾರಗಳನ್ನು ನಿರ್ಮೂಲಮಾಡಬೇಕಾದರೆ ಇನ್ನೂ ಅನೇಕ ಶತಮಾನಗಳಾಗಬೇಕು. ಅದುವರೆಗೂ ನಮಗೆ ಗುಲಾಮಗಿರಿಯೇ ಪ್ರಾಪ್ತಿ. ಪ್ರಕೃತ ನಮ್ಮ ತಮಿಳು ನಾಡಿನ ಬ್ರಾಹ್ಮಣ ಬಂಧುಗಳಲ್ಲಿ ನಮ್ಮ ವಿಜ್ಞಾಪನೆಯೊಂದಿದೆ. ಪ್ರಕೃತದಲ್ಲಿ ಡಾ|| ವರದರಾಜುಲುಯವರು ಸತ್ಯಾಗ್ರಹಕ್ಕೆ ಬದ್ಧಕಂಕಣರಾಗಿರುವುದರಿಂದ ನೀವುಗಳು ಅವರನ್ನು ಎದುರಿಸಿ ಫಲವಿಲ್ಲ. ಅವರು ಹೆಚ್ಚಿನ ಧನಸಹಾಯವನ್ನೂ ಜನ ಸಹಾಯವನ್ನೂ ಹೊಂದಿರುವರು. ನಿಮಗಾದರೋ ಯಾವ ಪಂಗಡದವರೂ ಸಹಾಯಮಾಡುವ ಹಾಗಿಲ್ಲ ಭರತಖಂಡದಲ್ಲೆಲ್ಲಾ ಬ್ರಾಹ್ಮಣದ್ವೇಷಿಗಳದ್ದೇ ಒಂದು ಮತವಾಗಿರುವುದು. ಈ ಮತದಲ್ಲಿ ಹಿಂದೂಗಳು ಮಾತ್ರವಲ್ಲದೆ ಮುಸಲ್ಮಾನರೂ ಕ್ರಿಸ್ತರೂ ಏರೋಪ್ಯರೂ ಕೂಡ ಸೇರಿರುವರು. ಆದುದರಿಂದ ಇವರೊಡನೆ ನಿಮಗೆ ಕಲಹವೇಕೆ? ನಮಗೆ ಧರ್ಮ ಬಿಟ್ಟು ಸ್ವರಾಜ್ಯಬೇಡ. ಸ್ವರಾಜ್ಯ ಸರಕಾರದಲ್ಲಿ ಮತಾಚಾರಗಳನ್ನು ಗೌರವದಿಂದ ಕಾಣುವುದಾದರೆ ಅಂತಹ ಸ್ವರಾಜ್ಯ ಪ್ರಾಪ್ತಿಯ ಕೆಲಸಗಳಲ್ಲಿ ಬ್ರಾಹ್ಮಣರು ಭಾಗಿಗಳಾಗಬೇಕು. ಧರ್ಮ ಬಿಟ್ಟು ಸ್ವರಾಜ್ಯವೇ! ಬೇಡ ಅದುದರಿಂದ ಗುರುಕುಲದ ಸರ್ವಸ್ವವನ್ನು ವರದರಾಜುಲುಯವರಿಗೆ ಬಿಟ್ಟು, ಬ್ರಾಹ್ಮಣರ ಜಾಲಕರನ್ನು ಅಲ್ಲಿಂದ ಬಿಡಿಸುವುದು ಮೇಲು. ಅನುಕೂಲವಿದ್ದರೆ ಬ್ರಾಹ್ಮಣರಿಗೆ ಒಂದು ಗುರುಕುಲ ಸ್ಥಾಪಿಸಿರಿ. ಸಾಧ್ಯವಿಲ್ಲದೆ ಹೋದರೆ ಬೇಡ. ಅಂತೂ ಸತ್ಯಾಗ್ರಹಕ್ಕೆ ಅವಕಾಶಕೊಡಬೇಡಿರಿ. ಇದರಲ್ಲಿ ನಿಮಗೆ ಯಾವ ಅಗೌರವವೂ ಇಲ್ಲ. ದೇವರು ನಿಮಗೆ ಮಂಗಳವನ್ನುಂಟುಮಾಡಲಿ!

ಶ್ರೀಮತಿ ಜುಲ್ಲಾನಾಥಮ್'ಲಾಲ್ ಎಂಬಾಕೆಯು ವೆಲ್ಲೂರು ತಾಲ್ಲುಬೋರ್ಡಿಗೆ ಮೆಂಬರಾಗಿ ನಿಯಮಿಸಲ್ಪಟ್ಟಿರುವಳು. ಆ ಡಿಸ್ಟ್ರಿಕ್ಟಿನಲ್ಲಿ ಹೆಂಗಸು ಸಭಾಸದ್ಯಳ್ಳತೆಗೆ ಇದೇ ಪ್ರಾರಂಭ.

"ಸತ್ಯವಾದಿ"

೨೪ ನೇ ಏಪ್ರಿಲ್ ೧೯೨೫

ಕವಿತಾ ಬಹುಮಾನಸ್ಪರ್ಧೆ

ದೀಪಾವಳ್ಯುತ್ಸವಾಂಗವಾಗಿ ನಮ್ಮ ಮಹಾ[ಜ್ಞ]ರು ಇಂದಿಗೆರಡುವರ್ಷಗಳಿಂದಲೂ "ಕ[ನ್ನ]ಡ ಬಹುಮಾನಸ್ಪರ್ಧೆ" ಯೊಂದನ್ನು ಏರ್ಪಡಿಸಿರಲ್ಲಿ ಉತ್ತಮಮಧ್ಯಮಗಳೆಂದು ಪ್ರಾಜ್ಞಮಂ[ಡ]ಲಿಯಿಂದ ನಿರ್ದೇಶಿತಗಳಾಗುವ ಕವಿತೆಗಳರಚಕರಿಗೆ ಶ[ಸ್ತಿ]ಜೋಡಿಗಳನ್ನೂ, ರೂಪಾಯಿಗಳನ್ನೂ ಬಹುಮಾನ ಮಾಡುವ ಪದ್ಧತಿಯು ನಡೆದುಬರುತ್ತಿದೆ. ಈ ಸ್ಪ[ರ್ಧೆ]ಯನ್ನು ಪ್ರಪ್ರಥಮದಲ್ಲಿ ಸಂಸ್ಕೃತವಾಣಿಗೆ ವ[ರ]ವನ್ನು ಏರ್ಪಡಿಸಲಾಗಿದ್ದಿತು. ಈಚೆಗೆ ಕರ್ಣಾಟಕವಾಣಿಯ ಮಹಾಪ್ರಭುಗಳವರ ಕೃಪಾ ಕಟಾಕ್ಷಕ್ಕೆ ಎಡೆಯಾಗಿ ಸಂಸ್ಕೃತಕರ್ಣಾಟಕವಿಗಳೆಲ್ಲರಿಗೂ ಇದೊಂದು ಪ್ರಸ್ತುತಕಾಲವು ಸಂಪ್ರಾಪ್ತವಾಯಿತು. ಇದರಿಂದ ಕವಿಗಳಿಗೆ ಪ್ರೋತ್ಸಾಹವೂ ಭಾಷೆಗೆ ಆಶ್ರಯವೂ [ಉ]ಂಟಾಕ್ಕೆ ಕೀರ್ತಿಯೂ ಲಭಿಸುವುದೆಂಬುದೇ ಮಹಾಪ್ರ[ಭು]ಗಳವರ ಉದ್ದೇಶವಾಗಿರಬಹುದೆಂದು ನಾವೂ ಎಲ್ಲ[ರೂ] ಊಹಿಸುವೆವು. ಆದರೆ ಈ ಸದುದ್ದೇಶವು ಸಫಲ[ವಾ]ಗಲು ಇಂತಿನ ಕಾರ್ಯಕ್ರಮಗಳು ಎಷ್ಟು ವಿ[ಧ]ದಿಂದ ಸಾಧಕಗಳಾಗಿರುವುವೆಂಬುದನ್ನು ಕುರಿತು ಸಮಾಲೋಚಿಸುವುದೇ ಈ ನಮ್ಮ ಲೇಖನದ ಸಂಕಲ್ಪವು.

ಅವುದಾದರೊಂದು ವಿಷಯವನ್ನು ಕುರಿತು ಕ[ವಿ]ತೆಯನ್ನು ಮಾಡಬೇಕೆಂದು ಕೆಲ ನಿಯಮಗಳನ್ನು ಹಾಕಿ[ಕೊ]ಟ್ಟು ಒಂದು ತಿಂಗಳ ಅವಧಿಯಲ್ಲಿ ಅರಮನೆಯ ಇ[ತಿ]ಹಾಸ ಮುಜರಾಯಧರ್ಮಕ್ಷೀಸಾಹೇಬರವರಿಗೆ ಕವಿತೆಗಳನ್ನು ಕಳುಸಿಕೊಡಬೇಕೆಂದು ಒಂದು ಹಸ್ತಪತ್ರವನ್ನು ಪ್ರಕಟಿಸಿ ವೃತ್ತಪತ್ರಿಕೆಗೆ ಕಳುಹಿಸುವುದೂ, ಅದರಲ್ಲಿ ಅಕಸ್ಮಾತ್ತಾಗಿ ಕಂಡ ಕವಿತಾಚಾಪಲ್ಯವೂ ವ್ಯವಸಾಯವೂ, ಆಸೆಯೂ ಅದೃಷ್ಟವೂ ಉಳ್ಳ ಕವಿಗಳಾದವರೆಯಲು ಪ್ರಯತ್ನಿಸಿ, ಬರೆದು ಕಳುಹಿಸುವುದಾದ[ರೆ] ಈ ರೀತಿಯಾಗಿ ಬರೆದುಬಂದ ಬರವಣಿಗೆಗಳನ್ನು ಮುಜರಾಯಧರ್ಮಕ್ಷೀಸಾಹೇಬರ ಅಧ್ಯಕ್ಷತೆಯನ್ನು ಪ್ರಾಜ್ಞಮಂಡಲಿಯು ಸಂಧ್ಯಾಕಾ[ಲ]ನಿಷ್ಕೃಷ್ಟವಾದ ಸ್ಥಳದಲ್ಲಿ [ಸೇ]ಕವಿಗಳ ನಾಮಧಾಮಗಳ[ನ್ನು] ನಡೆನುಡಿಗಳನ್ನೂ ಮೊದಲಾ[ದ] ನ ಜಾತುರ್ಯವನ್ನು ಪ[ರಿ]ಉತ್ತಮ ಮಧ್ಯಮಗಳ[ನ್ನು] ಇಲ್ಲಿಯ ಕಾರ್ಯಕ್ರ[ಮ] ನ್ಯಾಯ ದೊರೆಯುವ[ಂತೆ] ಮಂದಿಯ ಅಭಿಪ್ರಾ[ಯ] ಯಾದ ಬಳಿಕ ನ್ಯಾ[ಯ] ಸರ್ವಥಾ ಸರಿಯ[ಲ್ಲ] ಅದಂತಿರಲಿ. ಕ[ವಿ] ಆಗಬಹುದು ರು ತ್ರೋ[ಟ] ಕಾನೇಕ ಪದ್ಯಗ[ಳ]

ಮಹಾಪ್ರಭುಗಳವರು ಕವಿತಾ ಪ್ರೋತ್ಸಾಹಕ್ಕಾಗಿ ಈ ಸ್ಪರ್ಧೆಯನ್ನೇರ್ಪಡಿಸಿರುವುದು ಶ್ಲೋಕ ಬರೆಯುವವರ ಸಂಖ್ಯೆ ಹೆಚ್ಚಲೆಂದಲ್ಲ. ಅಥವಾ ಆವುದಾದರೊಂದು ಸಂಗತಿಯನ್ನು ಕಥಂಚಿತ್ ಬರೆದು ಮುಗಿಸುವ ಕವಿಗಳಿಗೆ ಒಹುಮಾನ ಮಾಡಬೇಂದಲ್ಲ. ಲೋಕೋಪಕಾರಕವಾದ ಹಲವು ಸಂಗತಿಗಳನ್ನು ಗರ್ಭೀಕರಿಸಿ ಶಾಶ್ವತವೂ ಶ್ಲಾಘ್ಯವೂ ಲೋಕಪ್ರಿಯವೂ ಆದ ಗ್ರಂಥಗಳನ್ನು ವಿರಚಿಸಿ ತದ್ವಾರ ಲೋಕೋಪಕಾರಮಾಡಿ ಆಚಂದ್ರಾರ್ಕವಾದ ಕೀರ್ತಿಯನ್ನು ಸಂಪಾದಿಸಿಕೊಳ್ಳುವಂತಹ ಕವಿಕುಲ ಸಾರ್ವಭೌಮರ ಸಂಖ್ಯೆ ಅಭಿವೃದ್ಧಿಯಾಗಲೆಂದೇ ಮಹಾಪ್ರಭುಗಳವರ ಈ ಉದಾರಾಶ್ರಯವು ದೊರೆತಿರುವುದು. ಕಾಳಿದಾಸ, ಭವಭೂತಿ, ದಂಡಿ, ಬಾಣ, ಬಿಲ್ಹಣ, ಮಲ್ಹಣ, ಹೊನ್ನ, ರನ್ನ, ಜನ್ನ, ಪಂಪ, ಷಡಕ್ಷರಿ, ನಾರಣಪ್ಪ, ಲಕ್ಷ್ಮೀಶ, ತಿರುಮಲೆಯಾರ್ಯ ಮುಂತಾದ ಮಹನೀಯರು ಹೇಗೆ ಶಾಶ್ವತ ಕೀರ್ತಿಯನ್ನು ಗಳಿಸಿದರೋ ಅವರಿಗೆ ಎಂತಹ ಪ್ರೋತ್ಸಾಹವಿದ್ದಿತೋ, ಅವರು ರಚಿಸಿದ ಗ್ರಂಥಗಳು ಇಂದಿನವರೆಗೂ ನವಪ್ರಸ್ಫುಟಿತವಾದ ಕುಸುಮದಂತೆ ಹೇಗೆ ಲೋಕಪೋಷಕವಾಗಿರುವುವೋ ಹಾಗೆಯೇ ಇಂದಿನ ಕವಿಗಳಿಗೆ ಕೀರ್ತಿಯೂ ಪ್ರೋತ್ಸಾಹವೂ ಲಭಿಸಿ, ಅವರ ಗ್ರಂಥಗಳಂತೆ ಚಿರಸ್ಥಾಯಿಯಾಗಿರಲೆಂದು ಎಳಸುವವರಾದ ಪಕ್ಷದಲ್ಲಿ ಇಂದಿನ ಕವಿತಾ ಬಹುಮಾನ ಸ್ಪರ್ಧೆಯ ನಿಯಮ ನಿಬಂಧನೆಗಳು ಈಗಿರುವುದಕ್ಕಿಂತ ಭಿನ್ನವಾಗಿರುವುದವಶ್ಯಕ.

ವೃತ್ತಾಂತ ಸಂಗ್ರಹ

ಕಾರ್ಪಸ್ಕಾಂಟಿನೋಪಲ್ಲಿನಲ್ಲಿ ಪ್ರಕಟವಾಗುತ್ತಿರುವ "ಟಾನಿನ್" ಪತ್ರಿಕೆಯು ಅಲ್ಲಿಯ ಸರ್ಕಾರದಿಂದ ನಿಲ್ಲಿಸಲ್ಪಟ್ಟಿದುದಲ್ಲದೆ, ಪತ್ರಿಕೆಯ ಇಬ್ಬರು ನೌಕರರು ದಸ್ತಗಿರಿ ಮಾಡಲ್ಪಟ್ಟಿರುವರು.

ಲಾರ್ಡ್ ಮತ್ತು ಲೇಡಿ ರೀಡಿಂಗ್‌ರವರು ಪೋಟ್ ಸೇಡನ್ನು ತಲಪಿರುತ್ತಾರೆ

ಕಾಶಿಯಲ್ಲಿ ಪ್ರಕಟಿತವಾಗುವ ಆಜ್ ಪತ್ರಿಕೆಯ ಸತ್ಯನಂತ ಪೋಲೀಸ್ ನೌಕರನ ಊಹಿಸ ಜ್ಞಾನದ ವಿಚಾರವಾಗಿ ಒಂದು ಲೇಖನ ಕಟಸಿದ್ದಕ್ಕಾಗಿ, ಒಬ್ಬ ಪೋಲೀಸಿಂದ ವಜಾಮಾಡಲ್ಪ

ಕೌನ್ಸಿಲಿನಲ್ಲಿ
ರ್ಯಹಕ ಸಭೆಗೆ ಒಬ್ಬ
ನ್ನು ಸಭಾಸದನಾಗಿ
ಕಟಕೃಷ್ಣಯ್ಯನವರು
ತು. ಈ ವಿಷಯ
ಗಾಪನೆಗೆ ತರುವು
ತಿಳಿಸಿದರು

ಲಿನ ಬಳಿ ಡ
ಗೆಗೆ ಸಂ
ಹಾಕಿ

ಮೈಸೂರು ಸಂಸ್ಥಾನದ ಎಲ್ಲಾ ಪ್ರಾಥಮಿಕ ಪಾಠಶಾಲೆಗಳಲ್ಲಿಯೂ ನೂಲುವದನ್ನೂ, ಮಿಡಲ್ ಸ್ಕೂಲುಗಳಲ್ಲಿ ಅದರ ಜೊತೆಗೆ ನೆಯ್ಯುವದನ್ನು ಖಡ್ಡಾಯ ಮಾಡಬೇಕೆಂಬ ವಿಚಾರದಲ್ಲಿ ಮೈ॥ ಹೊಸಕೊಪ್ಪ ಕೃಷ್ಣರಾಯರು ಮುಂದಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಒಂದು ತರಾವು ತರುವವರಾಗಿರುತ್ತಾರೆ.

ವೆಂಬ್ಲಿಯ ಬ್ರಿಟಿಷ್ ಎಂಪೈರ್ ವಸ್ತುಪ್ರದರ್ಶನವು ಮುಂದಿನ ತಿಂಗಳು 9 ಕ್ಕೆ ತೆರೆಯಲ್ಪಡುತ್ತೆ.

ಮುಜರಾಯಿ ಇಲಾಖೆಯಲ್ಲಿ ಪೋರ್ಜರಿಮಾಡಿ ಹಣ ದಸ್ತುಮಾಡಿದ ಅಪರಾಧಿ ಎಂ. ಎ. ನಾರಣಯ್ಯಂಗಾರ್ಯ ಮೇಲೆ ಪುನಃ ಪೀನಲ್ ಕೋಡು 419 ನೇ ಸೆಕ್ಷನ್ ರೀತ್ಯಾ ಸದರಿ ಅಪರಾಧಿಯು ಮೈಸೂರು ಚೀಫ್ ಎಲೆಕ್ಟ್ರಿಕಲ್ ಆಫೀಸಿಗೆ ಕೆಲಸಕ್ಕೆ ಅರ್ಜಿ ಹಾಕಿಕೊಳ್ಳುವುದರಲ್ಲಿ ತಾನು ನಾಯಿಡು ಜಾತಿಯವನೆಂದೂ ಹಿಂದುಳಿದ ಪಂಗಡಕ್ಕೆ ಸೇರಿದವನೆಂದೂ ಮತ್ತು ತಾನು ಮದರಾಸು ಯೂನಿವರ್ಸಿಟಿ ಇಂಟರ್ ಮೀಡಿಯಟ್ ಪರೀಕ್ಷೆ ಮಾಡಿದವನೆಂದೂ ಸುಳ್ಳು ಸಂಗತಿಯನ್ನು ನಮೂದುಮಾಡಿದ್ದರಿಂದ ಆಪಾದನೆ ತರಲ್ಪಟ್ಟಿದೆ ಎಂದು ತಿಳಿದುಬರುತ್ತೆ.

1000 ಕೋಟಿ ಕ್ಯಾಂಡಲ್ ಶಕ್ತಿಯುಳ್ಳ ಸದಾ ತಿರುಗುತ್ತಿರುವ ಲೈಟ್ ಹೌಸ್ ಶಿಖರವನ್ನು ಡಿಜಾನ್ ಸಮೀಪದ ಆಫ್ರಿಗೋ ಪರ್ವತದಮೇಲೆ ಮೊದಲನೆಯಸಲ ಹಚ್ಚಿಸಿದರು. ಬೆಳಕಿನ ಕಾಂತಿಯು ಬಹು ಪ್ರಕಾಶಮಾನವಾಗಿರುವುದೆಂದೂ ಮತ್ತು ಪ್ಯಾರಿಸ್ಸಿಗೂ ಆಲ್‌ಜಿಯರ್ಸ್‌ಗೂ ನಡುವೆ ಹಾರಾಡುವ ವಿಮಾನಗಳ ಉಪಯೋಗಕ್ಕಾಗಿ ಇಡಲ್ಪಟ್ಟಿದೆ. ಈ ಬೆಳಕಿನ ಕಾಂತಿಯು ಸುಮಾರು 500 ಮೈಲಿಗಳವರೆಗೂ ರಾತ್ರಿ ಕಾಲದಲ್ಲಿ ಕಾಣುತ್ತದಂತೆ.

ಕೆಲಾಲ್ ಎಂಬ ರೈಲು ಸ್ಟೇಷನ್ನಿನಿಂದ ಹೊರಟ ಒಂದು ಗುಡ್ಸು ರೈಲುಗಾಡಿಯ ಗಾರ್ಡು ತನ್ನ ಬಾವುಟವನ್ನು ಎತ್ತಿಜ್ಜ ನಡೆಸುವವನಿಗೆ ತೋರಿಸುತ್ತಿರುವಾಗ ಆಯತಪ್ಪಿ ತನ್ನ ಗಾಡಿಯಿಂದ ಬಿದ್ದುಬಿಟ್ಟನು. ಮುಂದಿನ ಸ್ಟೇಷನ್ ಸೆಬರಮತಿಯಲ್ಲಿ ನೋಡುವಲ್ಲಿ ಗಾರ್ಡು ಮಾಯವಾಗಿದ್ದನು. ರೈಲಿನಕಂಬಿ ಅಕ್ಕ ಪಕ್ಕ ಹುಡುಕಿದ್ದರಲ್ಲಿ ಕೆಲಾಲಿನ ಹತ್ರವೇ ಜ್ಞಾನತಪ್ಪಿ ಬಿದ್ದಿದ್ದನು. ಇವನನ್ನು ಚಿಕಿತ್ಸೆಗೆ ಆಸ್ಪತ್ರೆಗೆ ಒಯ್ಯಲು ಅಲ್ಲಿ ಮೃತವಟ್ಟನು.

ಜೈಲಿನವಧಿ ಪೂರೈಸಿ ಬಿಡುಗಡೆ ಹೊಂದಿ ಬರುವ ಖೈದಿಗಳಿಗೆ ಮುಂದೆ ನ್ಯಾಯಮಾರ್ಗದಲ್ಲಿ ತನ್ಮ ಜೀವನೋಪಾಯವನ್ನು ಕಲ್ಪಿಸಲು ಮೈಸೂರು ಮ್ಯುನಿಸಿಪಲ್ ಕೌನ್ಸಿಲರವರು ಒಂದು ಜಾಯಿಂಟು ಕಮಿಟಿ ಏರ್ಪಡಿಸಬೇಕೆಂಬ ಉದ್ದೇಶವನ್ನು ಡಿಸ್ಟ್ರಿಕ್ಟು ಬೋರ್ಡು ವಿಾಟಿಂಗಿನಲ್ಲಿ ಅನುಮೋದಿಸಿದರು.

ಭಾವಾ ನಗರದ ಮೈನರು ಮಹಾರಾಜರು ತಮ್ಮಂದಿರೊಡನೆ ವಿದ್ಯಾಭ್ಯಾಸಕ್ಕಾಗಿ ಲಂಡನ್ನಿಗೆ ಹೋದರು ಇಂಡಿಯಾದಲ್ಲಿ ಇಷ್ಟು ವಿದ್ಯಾಲಯಗಳಿದ್ದು ನಮ್ಮ ದೇಶದ ರಾಜರುಗಳಿಗೆ ವಿದ್ಯೆ ಕಲಿಸುವಷ್ಟು ಶಕ್ತಿ ಹೊಂದದಿರುವುದು ಶೋಚನೀಯವಾದ ಸಂಗತಿಯೇ ಸರಿ.

ಹಿಂದೂ ಮಹಾಸಭೆಯು ದೇಶಭಕ್ತ ಲಾಲಾಲಜಪತರಾಯರ ಅಧ್ಯಕ್ಷತೆಯಲ್ಲಿ ಕಲಿಕತ್ತಾನಗರದಲ್ಲಿ ಸೇರಿತು. ಶುದ್ಧಿ, ಅಸ್ಪೃಶ್ಯತೆಯ ನಿವಾರಣೆ, ಹಿಂದೂ ಸಂಘಟನೆ, ಇವೇ ಮೊದಲಾದ ವಿಷಯಗಳ ಪರವಾಗಿ ತರಾವುಗಳು ಜಲಾಯಿಸಲ್ಪಟ್ಟವು.

ದರ್ಭಾಂಗದ ಮಹಾರಾಜರು ಲಾಹೋರಿನ ಸನಾತನ ಧರ್ಮ ಕಾಲೇಜಿನ ಸೈನ್ಸು ಇಲಾಖೆಗೆ ರೂ 25000 ಗಳನ್ನು ದಯೆಪಾಲಿಸಿರುವರು.

ಮಲಬಾರಿನಲ್ಲಿ ಥೀಯರನ್ನು ತಮ್ಮ ಜಾತಿಗೆ ತೆಗೆದುಕೊಳ್ಳಬೇಕೆಂದು ಕ್ರಿಸ್ತರ ಪ್ರಯತ್ನವು ನಡೆಯುತ್ತಿರುವುದು. ಓ ಹಿಂದುಗಳೇ! ಜಾಗ್ರತೆಯಾಗಿರಿ!

ರಾವ್ ಬಹದ್ದೂರ್ ಜಿ. ಎಸ್. ನಾರಾಯಣಯ್ಯನವರು ಕೊಚ್ಚಿ ಸಂಸ್ಥಾನದ ದಿವಾನರಾಗಿ ನೇಮಿಸಲ್ಪಟ್ಟಿರುವರು.

ಹಿಂದೂ ಮಹಾಸಭೆಯವರು ಕೋಮುವಾರು ಪ್ರತಿನಿಧಿತ್ವವು ದೇಶದ ಹಿತಕ್ಕೆ ಒಳ್ಳೆಯದಲ್ಲವೆಂದು ತೀರ್ಮಾನಿಸಿರುವರು.

ಫ್ರೆಂಚು ಮಂತ್ರಿಮಂಡಲವು ರಾಜೀನಾಮೆ ಕೊಟ್ಟಿದೆ. ಮುಂದಿನ ಮಂತ್ರಿಗಳಾಗಲು ಯಾರೂ ಮುಂದೆ ಬರುವುದಿಲ್ಲ.

ಯಂ. ಪೈನಲ್ವ್ವರವರು ಫ್ರಾನ್ಸಿನ ಮುಖ್ಯ ಮಂತ್ರಿಗಳಾದರು.

ವೈಸರಾಯಿಯವರ ಎಕ್ಸಿಕ್ಯುಟಿವ್ ಸಭೆಯ ಮೆಂಬರಾದ ಸರ್ ಹಬೀದುಲ್ಲಾರವರು ಬೆಂಗಳೂರಿಗೆ ಬಂದಿರುತ್ತಾರೆ.

—

ತಮಿಳುನಾಡ ಕಮಿಟಿಯವರು 'ಸ್ವರಾಜ್ಯ ಕಂಪೆನಿಗೆ' ೧೦ ರೂಪಾಯಿಗಳನ್ನು ಕೊಟ್ಟಿದ್ದರು. ಈ ವಿಷಯದಲ್ಲಿ ಅವರವರಿಗೆ ತುಂಬಾ ಚರ್ಚೆ ನಡೆದು ಕಡೆಗೆ ಮಹಾತ್ಮಾ ಗಾಂಧಿಯವರಿಗೆ ತಿಳಿಯಪಡಿಸಿ, ಅವರ ಹೇಳಿಕೆಯಂತೆ ನಡೆಯಲು ಒಪ್ಪಿದರು. ಈಗ ಮಹಾತ್ಮಾ ಗಾಂಧಿಯವರು ಆ ರೂಪಾಯಿಗಳನ್ನು ವಾಪ್ಸುಕೊಡಬೇಕೆಂದು ತೀರ್ಮಾನಮಾಡಿರುತ್ತಾರೆ.

—

ಬೆಂಗಳೂರಿನಲ್ಲಿ ಟಿಪ್ಪು ಸುಲ್ತಾನ್ ಅರಮನೆಯಲ್ಲಿ ನೂಲು ತೆಗೆಯುವಸಂಘ ನಡೆಯಿತೆಂದೂ, ೧೨ ಜನ ಉಮೇದುವಾರರಾಗಿದ್ದರೆಂದೂ, ೩ ಜನರಿಗೆ ಬಹುಮಾನ ದೊರೆಯಿತೆಂದೂ ತಿಳಿಯಬಂದಿದೆ.

ಬೊಂಬಾಯಿ ಬಾವ್ಲಾ ಖೂನಿ ಮೊಖದ್ದಮೆಯಲ್ಲಿ ಅಪರಾಧಿಯಾಗಿರುವ ಪಟೆ ಎಂಬುವರ ಕಡೆ ಕಲಿಕತ್ತಾದ ಬ್ಯಾರಿಷ್ಟರ್ ಸೆ॥ ಗುಪ್ತಾರವರು ಮೊಖದ್ದಮೆ ನಡೆಸುವರು.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ಖಾದಿ ಬಟ್ಟೆಗಳನ್ನು ಪ್ರೋತ್ಸಾಹಿಸಲು ಕೆಲವು ಮೊಬಲಗನ್ನು ಕಾಂಗ್ರೆಸ್ ಕಮಿಟಿಯವರಿಗೆ ಕೊಡಲು ಮಂಜೂರು ಮಾಡಿರುವರು.

ಕರ್ನಾಟಕ ಸಾಹಿತ್ಯಪರಿಷತ್ತಿನ ಈ ವರ್ಷದ ಸಮ್ಮೇಳನವು ಮುಂದಿನ ತಿಂಗಳ ೯ ಕ್ಕೆ ಬೆಳಗಾಮಿನಲ್ಲಿ ನಡೆಯುವುದಾಗಿ ತಿಳಿಯಬಂದಿದೆ.

ಭರತಖಂಡದ ಎಲ್ಲಾ ಕಡೆಯಿಂದಲೂ ಇದುವರೆಗೆ ೧೨೬೯ ಕಾಂಗ್ರೆಸ್ ಮೆಂಬರಾಗಿರುವರು.